| | |
|---|---|
| ಕರ್ನಾಟಕ ಸರ್ಕಾರ | ಸಿ ಆರ್ ಪಿ ಸಿ 67 |

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.3360/2024

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ವೆಂಕಟೇಶ್ ಚೌಹ್ವಾಣ್** | | |
| **ತಂದೆಃಹೆಸರು** | **ಸಂಗಪ್ಪ** | **ಪಿಡಬ್ಲೂಃ** | **08** |
| **ವಯಸ್ಸು** | **55 ವರ್ಷ** | **ಸಿಡಬ್ಲೂಃ** | **19** |
| **ಉದ್ಯೋಗಃ** | **ಪಿ ಎಸ್ ಐ** | | |
| **ವಾಸ ಸ್ಥಳಃ** | **ಗ್ರಾಮೀಣ ಪೋಲೀಸ್ ಠಾಣೆ, ಗಂಗಾವತಿ.** | | |

**ದಿನಾಂಕ 29-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ನಾನು ದಿ.03-08-2023 ರಿಂದ ದಿ.02-02-2025 ರವರೆಗೆ ಸಿಂಧನೂರು ಸಂಚಾರಿ ಠಾಣೆಯಲ್ಲಿ ಪಿ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ07.09.2024 ರಂದು ರಾ. 8 ಗಂಟೆಗೆ ನಾನು ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸಮಯದಲ್ಲಿ ದೂರುದಾರರು ಠಾಣೆಗೆ ಹಾಜರಾಗಿ, ಗಣಕೀಕೃತ ದೂರನ್ನು ತಂದು ಹಾಜರುಪಡಿಸಿದ್ದು, ಸದರಿ ದೂರಿನ ಆಧಾರದ ಮೇಲೆ ಠಾಣಾ ಮೊಕದ್ದಮೆ ಸಂಖ್ಯೆ 46/2024 ಪ್ರಕರಣವನ್ನು ಕಲಂ.281, 125 ಬಿ ಬಿ ಎನ್ ಎಸ್ ಅಡಿಯಲ್ಲಿ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ. ಸಾಕ್ಷಿಯು ನಿಪಿ-9 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರಥಮ ವರ್ತಮಾನ

ವರದಿಯನ್ನು  ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ ಕಾರಣ ಪ್ರಥಮ ವರ್ತಮಾನ ವರದಿಯನ್ನು ನಿ.ಪಿ.14, ಸಾಕ್ಷಿಯ ಸಹಿಯನ್ನು ನಿ.ಪಿ.14(ಎ) ಎಂದು ಗುರುತಿಸಲಾಯಿತು.

ದಿ.08-09-2024 ರಂದು ಚಾಸಾ-1 ರವರು ತೋರಿಸಿದಂತೆ ನಿಪಿ-1 ರಂತೆ ಗುನ್ನಾ ಸ್ಥಳಕ್ಕೆ ಭೇಟಿ ನೀಡಿ, ಪಂಚರಾದ ಚಾಸಾ-2 & 3 ರವರ ಸಮಕ್ಷಮ ಮಾಡಿ, ನಿಪಿ-2, 3 ಫೋಟೋ ತೆಗೆದಿರುತ್ತೇನೆ. ಅದೇ ದಿನ ಬೆ. 11-30 ರಿಂದ 12 ಗಂಟೆಯವರೆಗೆ ನಿಪಿ-4 ರಂತೆ ವಾಹನ ತಡೆ ಪಂಚನಾಮೆ ಮಾಡಿ, ನಿಪಿ-5 & 6 ನ್ನು ತೆಗೆದಿರುತ್ತೇನೆ. ನಿಪಿ-1 & 4 ರಲ್ಲಿನ ಸಾಕ್ಷಿಯ ಸಹಿಗಳನ್ನ ನಿಪಿ-1 ಡಿ & 4 ಸಿ ಎಂದು ಗುರುತಿಸಲಾಯಿತು.

ಚಾಸಾ-16 ರವರನ್ನು ಅಪಘಾತ ಸ್ಥಳದ ಬಳಿ ಇರುವ ರಾಮ್ ರಾಜ್ ಬಟ್ಟೆ ಅಂಗಡಿಯ ಸಿಸಿ ಟಿ ವಿ ಫುಟೇಜ್ ತೆಗೆದುಕೊಂಡು ಬರುವಂತೆ ಕಳಿಸಿದ್ದು, ಸದರಿಯವರು ಸದರಿ ದೃಶ್ಯಾವಳಿಯನ್ನು ಪಂಚರ ಸಮಕ್ಷಮ ಬಂದು, ತಂದು ಹಾಜರುಪಡಿಸಿರುತ್ತಾರೆ. ಸಾಕ್ಷಿಯು ನಿಪಿ-7 & 8 ರಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-7 ಸಿ & 8 ಎ ಎಂದು ಗುರುತಿಸಲಾಯಿತು.

ದಿ.18-09-2024 ರಂದು ಚಾಸಾ-13 ರವರು ಠಾಣೆಗೆ ಹಾಜರಾಗಿ ವಾಹನದ ದಾಖಲೆಗಳನ್ನು ಹಾಜರುಪಡಿಸಿದ್ದು, ಅವರಿಗೆ ಕಲಂ.133 ನೋಟೀಸನ್ನು ಕೊಟ್ಟು, ಉತ್ತರ ಪಡೆದು, ಇಂಡಿಮಿನಿಟಿ ಬಾಂಡನ್ನು ಪಡೆದು, ವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ನೋಟೀಸನ್ನು ನಿಪಿ-15 ಎಂದು, ಸಾಕ್ಷಿಯ ಸಹಿಯನ್ನು ನಿಪಿ-15 ಎ ಎಂದು, ಉತ್ತರವನ್ನು ನಿಪಿ-16 ಎಂದು, ಸಾಕ್ಷಿಯ ಸಹಿಯನ್ನು ನಿಪಿ-16 ಎ ಎಂದು, ಸಿಡಿಯನ್ನು ನಿಪಿ-17 ಎಂದು, ಸಾಕ್ಷಿಯ ಸಹಿಯನ್ನು ನಿಪಿ-17 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ವಾಹನದ ದಾಖಲೆಗಳನ್ನು & ಆರೋಪಿಯ ಡಿಎಲ್ ನ್ನು ನೋಡಿ ಗುರುತಿಸಿರುತ್ತಾರೆ. ಆ ಕಾಲಕ್ಕೆ ಚಾಸಾ-13 ರವರ ಹೇಳಿಕೆ ಪಡೆದಿದ್ದೆ.

ಅದೇ ದಿನ ಆರೋಪಿತನು ಖುದ್ದಾಗಿ ಠಾಣೆಗೆ ಹಾಜರಾಗಿ, ನ್ಯಾಯಾಲಯದಿಂದ ಪಡೆದ ಜಾಮೀನಿನ ಪ್ರತಿಯನ್ನು ತಂದು ನನ್ನ ಮುಂದೆ ಹಾಜರುಪಡಿಸಿದ್ದು, ಆತನ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ, ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಆರೋಪಿ ವಾಹನ ಚಾಲನೆ ಮಾಡುವಾಗ ಮದ್ಯಸೇವನೆ ಮಾಡಿದ ಬಗ್ಗೆ ಡಿಡಿ ಮಾಡಿರುತ್ತೇನೆ. ಸದರಿ ವರದಿಯು ನೆಗೆಟಿವ್ ಎಂದು ಬಂದಿರುತ್ತದೆ.  ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-18 ಎಂದು, ಸಾಕ್ಷಿಯ ಸಹಿಯನ್ನು ನಿಪಿ-18 ಎ ಎಂದು ಗುರುತಿಸಲಾಯಿತು.

ದಿ.05-10-24 ರಂದು ಸಿ.ಸ.ಆಸ್ಪತ್ರೆಯಿಂದ ಗಾಯಾಳು ಮೃತರಾದ ಬಗ್ಗೆ ವರದಿ ಬಂದಿದ್ದು, ಅದರಂತೆ ಕಲಂ.106 ಅಳವಡಿಸಲು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡು, ಅನುಮತಿಯನ್ನು ಪಡೆದಿರುತ್ತೇನೆ.

ನಂತರ ಮೃತರ ಶವ ಪಂಚನಾಮೆಯನ್ನು ಚಾಸಾ-4 & 5 ರವರ ಸಮಕ್ಷಮ ಮಾಡಿ, ಭಾವಚಿತ್ರಗಳನ್ನು ತೆಗೆದಿರುತ್ತೇನೆ. ಸಾಕ್ಷಿಯು ಶವ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-19 ಎಂದು, ಸಾಕ್ಷಿಯ ಸಹಿಯನ್ನು ನಿಪಿ-19 ಎ ಎಂದು ಗುರುತಿಸಲಾಯಿತು. ಮೃತರ 4 ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-20 ರಿಂದ 23 ಎಂದು ಗುರುತಿಸಲಾಯಿತು. ನಂತರ ಮೃತರ ತಂದೆ ಚಾಸಾ-8 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಸಾಕ್ಷಿಯು ಕಲಂ.63 ಬಿ ಎಸ್ ಎ ಪ್ರ.ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-24 ಎಂದು, ಸಾಕ್ಷಿಯ ಸಹಿಯನ್ನು ನಿಪಿ-24 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಸಿಡಿ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-25 ಎಂದು, ಸಾಕ್ಷಿಯ ಸಹಿಯನ್ನು ನಿಪಿ-25 ಎ ಎಂದು ಗುರುತಿಸಲಾಯಿತು. ಚಾಸಾ-11 ರಿಂದ 13 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ಅದೇ ದಿನ ಮುಂದಿನ ತನಿಖೆಯನ್ನು ಚಾಸಾ-20 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಸಾಕ್ಷಿಯು ನಿಪಿ-13 ರಲ್ಲಿರುವ ದೃಶ್ಯಾವಳಿಯನ್ನು & ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ**

1. ಈ ಪ್ರಕರಣದ ಕುರಿತು ನಿಮಗೆ ಮಾಹಿತಿ ಹೇಗೆ, ಎಷ್ಟು ಗಂಟೆಗೆ ಬಂದಿತ್ತು ಎಂದರೆ ಸಾಕ್ಷಿಯು 5 ಗಂಟೆಗೆ ಬಂದಿತ್ತು ಎನ್ನುತ್ತಾರೆ. ಮಾಹಿತಿಯನ್ನು ಯಾರು ಕೊಟ್ಟಿದ್ದರು ಎಂದರೆ ಸಾಕ್ಷಿಯು ಬಾತ್ಮಿದಾರರು ಕೊಟ್ಟಿದ್ದರು ಎನ್ನುತ್ತಾರೆ. ಮಾಹಿತಿ ಬಂದ ತಕ್ಷಣವೇ ನೀವು ಪ್ರ. ವ. ವರದಿ ದಾಖಲಿಸಿರುತ್ತೀರಾ ಎಂದರೆ ಸಾಕ್ಷಿಯು ದೂರುದಾರರು ದೂರು ಕೊಟ್ಟ ನಂತರ ದಾಖಲಿಸಿದ್ದೆ ಎನ್ನುತ್ತಾರೆ.

2. ಅಪಘಾತ ನಡೆದ ದಿನ ನಾನು ಅಪಘಾತ ಸ್ಥಳಕ್ಕೆ ಭೇಟಿ ಕೊಟ್ಟಿದ್ದೆ. ಪಂಚನಾಮೆಯನ್ನು ಮರು ದಿನ ಮಾಡಿದ್ದೆ. ಘಟನಾ ಸ್ಥಳದ ಒಟ್ಟು ರಸ್ತೆಯ ಅಳತೆ 50 ಅಡಿ ಇದೆ. ಸಿಂಧನೂರಿನಿಂದ ಗಂಗಾವತಿಗೆ ಹೋಗುವಾಗ ರಸ್ತೆಯ ಎಡಗಡೆ ಭಾಗದಲ್ಲಿ ಅಪಘಾತ ಆಗಿತ್ತು. ಆ ರಸ್ತೆಯ ಮಧ್ಯೆದಲ್ಲಿ ವಿಭಜಕ ಇದೆ ಎಂದರೆ ಸರಿ. ರಸ್ತೆಯ ವಿಭಜಕದ ಎಷ್ಟು ಅಂತರದಲ್ಲಿ ಅಪಘಾತ ಆಗಿತ್ತು ಎಂದರೆ ಸಾಕ್ಷಿಯು ವಿಭಜಕದ ಪಕ್ಕದಲ್ಲಿ ಅಪಘಾತ ಆಗಿತ್ತು ಎನ್ನುತ್ತಾರೆ. ಪಂಚನಾಮೆಯ ಕಾಲಕ್ಕೆ ನೀವು ಅಳತೆ ಮಾಡಿದ್ದಿರಾ ಎಂದರೆ ಸಾಕ್ಷಿಯು ಅಂದಾಜು ಹೇಳಿದ್ದೆ ಎನ್ನುತ್ತಾರೆ. ಪಕ್ಕದಲ್ಲಿ ಎಂದರೆ ಎಷ್ಟು ಅಳತೆ ಎಂದರೆ ಸಾಕ್ಷಿಯು 5 ಅಡಿ ಎನ್ನುತ್ತಾರೆ.

3. ಮೊದಲ ದಿನ ನಾನು ಘಟನಾ ಸ್ಥಳಕ್ಕೆ ಹೋದಾಗ ಘಟನಾ ಸ್ಥಳದ ಅಕ್ಕಪಕ್ಕದವರ ಹೇಳಿಕೆ ಪಡೆದಿಲ್ಲ.

4. ಘಟನಾ ಸ್ಥಳ ರಾಜ್ಯ ಹೆದ್ದಾರಿ ಇರುವುದರಿಂದ ವಾಹನ ದಟ್ಟಣೆ ಇರುತ್ತದೆ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ಜೀಬ್ರಾ ಕ್ರಾಸ್ ಅಥವಾ ಜನರು ಓಡಾಡಲು ಸ್ಥಳ ಇಲ್ಲ ಎಂದರೆ ಸರಿ. ರಸ್ತೆ ವಿಭಜಕವನ್ನು ಜನರು ಅದನ್ನು ದಾಟಿ ಓಡಾಡಬಾರದು ಎಂದು ಹಾಕಿರುತ್ತಾರೆ ಎಂದರೆ ಸರಿ. ರಸ್ತೆಯ ನಿಯಮಗಳನ್ನು ಪಾಲಿಸಲು ಸದರಿ ಡಿವೈಡರ್ ಹಾಕಿರುತ್ತಾರೆ ಎಂದರೆ ಸರಿ.

5. ಮೃತರು ಎಲ್ಲಿಂದ ಬರುತ್ತಿದ್ದರು ಎಂದರೆ ಸಾಕ್ಷಿಯು ಜವಳಗೇರಾದಿಂದ ದೇವಸ್ಥಾನಕ್ಕೆ ಹೋಗುತ್ತಿದ್ದರು, ವಾಹನವನ್ನು ಸೈಡಿಗೆ ಹಾಕಿ, ಬಟ್ಟೆ ತರಲು ಅಂಗಡಿಗೆ ಹೋಗುತ್ತಿದ್ದರು ಎನ್ನುತ್ತಾರೆ.

6. ಚಾಸಾ-16 ರವರು ಸಿಸಿ ಟಿವಿ ಫುಟೇಜ್ ತಂದೆ ಬಗ್ಗೆ ಹೇಳಿಕೆ ಪಡೆದಿಲ್ಲ. ಯಾವ ವಿಧಾನದಿಂದ ಸದರಿ ಸಿಸಿಟಿವಿ ಫುಟೇಜನ್ನು ತಂದಿದ್ದರು ಎಂದು ನಾನು ಅವರನ್ನು ವಿಚಾರಣೆ ಮಾಡಿಲ್ಲ. ಸದರಿಯವರು ಒರಿಜಿನಲ್ ಡಿವೈಸನ್ನು ತಂದಿದ್ದರಾ ಎಂದರೆ ಸಾಕ್ಷಿಯು ಸಿಸಿಟಿವಿ ಫುಟೇಜನ್ನು ಸಿಡಿಯಲ್ಲಿ ಹಾಕಿ ಕೊಟ್ಟಿದ್ದರು ಎನ್ನುತ್ತಾರೆ. ಸದರಿ ವಿಚಾರವಾಗಿ ಅವರಿಂದ ನಾನು ಕಲಂ.63 ಬಿ. ಎಸ್ ಎ ಪ್ರ.ಪತ್ರ ಪಡೆದಿಲ್ಲ. ನಿಪಿ-13 ರಲ್ಲಿರುವ ದೃಶ್ಯಾವಳಿಯನ್ನು ಎಡಿಟ್ ಮಾಡುವ ಸಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ.

7. ಸಿಸಿಟಿವಿ ಯನ್ನು ಯಾರು ಮೇಂಟೇನ್ ಮಾಡುತ್ತಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನೀವು ನಿಪಿ-13 ನ್ನು ನ್ಯಾಯಾಲಯಕ್ಕೆ ಎಡಿಟ್ ಮಾಡಿ ಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ನಿಪಿ-13 ರಲ್ಲಿ ವಾಹನದ ಸಂಖ್ಯೆ & ಆರೋಪಿಯ ಮುಖ ಕಾಣುವುದಿಲ್ಲ ಎಂದರೆ ಸರಿಯಲ್ಲ.

**ಈಗ ಸಮಯ ಮಧ್ಯಾಹ್ನ 2 ಗಂಟೆ ಆಗಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನ 2-45 ಕ್ಕೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿಂಧನೂರು.**

ದಿನಾಂಕ 29-07-2026 ರಂದು ಸಾಕ್ಷಿಯನ್ನು ಪುನಃ 3-36 ಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ

8. ಸಿಸಿ ಟಿ ವಿ ಫುಟೇಜ್ ಯಾವ ದಿನಾಂಕ, ತಿಂಗಳಿಗೆ ಸಂಬಂಧಿಸಿದ್ದು ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ. ನಿಪಿ-13 ರ ಮುಖೇನ ಯಾವ ದಿನಾಂಕ, ಸಮಯದಂದು ಅಪಘಾತ ಆಗಿತ್ತು ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ಸಿಸಿ ಟಿವಿ ಕ್ಯಾಮೆರಾ ಸುಸ್ಥಿತಿಯಲ್ಲಿತ್ತು ಎಂಬ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿ.

9. ಅಪಘಾತ ಆರೋಪಿ & ಆರೋಪಿಯ ವಾಹನದ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನಕ್ಕೆ ಎಲ್ಲಾ ದಾಖಲೆಗಳಿವೆ, ಆದ್ದರಿಂದ ಪರಿಹಾರ ಬರುತ್ತದೆ ಎಂದು ಸುಳ್ಳು ಕೇಸನ್ನು ಹಾಕಿದ್ದೀರಿ ಎಂದರೆ ಸರಿಯಲ್ಲ.

10. ಮೃತ ವ್ಯಕ್ತಿ ರಸ್ತೆಯ ನಿಯಮವನ್ನು ಪಾಲನೆ ಮಾಡದೆ, ತಾನೇ ಬೇರೆ ವಾಹನಕ್ಕೆ ಡಿಕ್ಕಿ ಹೊಡೆದು ಅಪಘಾತಪಡಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ.

11. ಸದರಿ ಸಿಸಿ ಟಿ ವಿ ಫುಟೇಜ್ ಆರೋಪಿಯೇ ಅಪಘಾತ ಪಡಿಸಿದ ಬಗ್ಗೆ ಸಾಕ್ಷ್ಯ ಅಲ್ಲ ಎಂದರೆ ಸರಿಯಲ್ಲ. ಸದರಿ ಸಿಸಿ ಟಿ ವಿ ರಾಮರಾಜ್ ಬಟ್ಟೆ ಅಂಗಡಿಯವರದ್ದು ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ.

12. ಮೃತ ವ್ಯಕ್ತಿ ಆಸ್ಪತ್ರೆಯಲ್ಲಿ ಗುಣಮುಖನಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ಮನೆಗೆ ಬಂದಿದ್ದ ಬಗ್ಗೆ ಗೊತ್ತು ಎನ್ನುತ್ತಾರೆ. ಆತ ಎಷ್ಟು ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದ ಎಂದರೆ ಸಾಕ್ಷಿಯು ಉತ್ತರಿಸಿಲ್ಲ. ಮೃತರು ಉಸಿರಾಟದ ತೊಂದರೆಯಿಂದ ಮೃತರಾಗಿದ್ದರು, ಅಪಘಾತದಿಂದ ಆದ ಗಾಯಗಳಿಂದ ಅಲ್ಲ ಎಂದರೆ ಸರಿಯಲ್ಲ. ಮೃತರು ಉಸಿರಾಟದ ತೊಂದರೆಯಿಂದ ಮೃತರಾಗಿದ್ದರು ಎಂದು ಕೇಸ್ ಡೈರಿಯಲ್ಲಿ ನಮೂದು ಇದೆ ಎಂದರೆ ಸರಿ. ಸಾಕ್ಷಿಯು ಒಪ್ಪಿಕೊಂಡಿರುವ ನಿಪಿ-19 ರ 2 ಕಡೆ ಇರುವ 3 ಸಾಲುಗಳನ್ನು ನಿಪಿ-19 ಬಿ & ಸಿ ಎಂದು ಗುರುತಿಸಲಾಯಿತು.

13. ನೀವು ಯಾವುದೇ ಪ್ರಕರಣ ದಾಖಲಿಸಿಕೊಂಡಿಲ್ಲ, ನೀವು ಯಾವುದೇ ಪಂಚನಾಮೆಗಳನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ದಾಖಲೆಗಳನ್ನು ಪಡೆದಿಲ್ಲ, ಸುಳ್ಳು ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಮೃತರ ಕುಟುಂಬಕ್ಕೆ

ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಸುಳ್ಳು ದೂರು ಸ್ವೀಕರಿಸಿ, ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಸುಳ್ಳು ದೂರು ದಾಖಲಿಸಿಕೊಂಡು, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**